**ಕರ್ನಾಟಕ ಸರ್ಕಾರ**

**ಸಮಾಜ ಕಲ್ಯಾಣ ಇಲಾಖೆ**

**ಆಯುಕ್ತರ ಕಛೇರಿ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ,**

**ಬೆಂಗಳೂರು-01**

ಸಂಖ್ಯೆ:ಸಕಇ/ಪಪೂತಕೇ/ಎಸ್-4/ಸಿಆರ್-01/2022-23 ದಿನಾಂಕ: 03.02.2023

**ಪ್ರಕಟಣೆ**

ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ 2022-23 ನೇ ಸಾಲಿಗೆ ಭಾರತೀಯ ಸೇನೆ / ಭದ್ರತಾ ಪಡೆ / ಪೋಲೀಸ್ ಸೇವೆ ಸೇರಿದಂತೆ ಇತರೆ ಯೂನಿಫಾರ್ಮ್ ಸೇವೆಗಳಿಗೆ ಸೇರ ಬಯಸುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗದ ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ಉಚಿತ ವಸತಿಯುತ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿ ನೀಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.02.2023 ಹೆಚ್ಚಿನ ವಿವರಗಳಿಗೆ ಇಲಾಖೆಯ ವೆಬ್ ಸೈಟ್ www.sw.kar.nic.in ನ್ನು ಸಂಪರ್ಕಿಸುವುದು.

04.02.23

ಆಯುಕ್ತರು,

ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

**ಕರ್ನಾಟಕ ಸರ್ಕಾರ**

**ಸಮಾಜ ಕಲ್ಯಾಣ ಇಲಾಖೆ**

ಸಂಖ್ಯೆ:ಸಕಇ/ಪಮೂತಕೇ/ಎಸ್-4/ಸಿಆರ್-01/2022-23

ಸಮಾಜ ಕಲ್ಯಾಣ ಆಯುಕ್ತರ ಕಛೇರಿ,
5ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 03.02.2023

**ಅಧಿಸೂಚನೆ**

ವಿಷಯ: 2022-23 ನೇ ಸಾಲಿಗೆ ಭಾರತೀಯ ಸೇನೆ / ಭದ್ರತಾ ಪಡೆ / ಪೊಲೀಸ್ ಸೇವೆ ಸೇರಿದಂತೆ ಇತರೆ ಯೂನಿಫಾರ್ಮ್ ಸೇವೆಗಳಿಗೆ ಸೇರ ಬಯಸುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗದ ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ಉಚಿತ ವಸತಿಯುತ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿ ನೀಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಬಗ್ಗೆ.

2022-23 ನೇ ಸಾಲಿಗೆ ಭಾರತೀಯ ಸೇನೆ / ಭದ್ರತಾ ಪಡೆ / ರಾಜ್ಯ ಪೊಲೀಸ್ ಸೇವೆ / ಅಗ್ನಿವೀರ್ ಮೊದಲಾದ ಸಮವಸ್ತ್ರ (Uniform) ಸೇವೆಗಳಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗದ ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ಉಚಿತವಾಗಿ 3 ತಿಂಗಳು ವಸತಿಯುತ ದೈಹಿಕ ಸಾಮರ್ಥ್ಯ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ನೀಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಯ ಅವಧಿ, ಶೈಕ್ಷಣಿಕ ವಿದ್ಯಾರ್ಹತೆ, ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ ಮತ್ತು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ. | ಕೋರ್ಸ್‌ಗಳ ವಿವರ ಹಾಗೂ ವಿದ್ಯಾರ್ಹತೆ | | |
|---|---|---|---|
| 1. | ತರಬೇತಿ ವಿಧ | ವಿದ್ಯಾರ್ಹತೆ | ತರಬೇತಿ ಅವಧಿ |
| | ಸಮವಸ್ತ್ರ (Uniform) ಸೇವೆಗಳಿಗೆ ವಸತಿಯುತ ತರಬೇತಿ | 10ನೇ ತರಗತಿ ಉತ್ತೀರ್ಣರಾಗಿರಬೇಕು. | ವಸತಿಯುತ 90 ದಿನಗಳ ತರಬೇತಿಯಲ್ಲಿ ದೈಹಿಕ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ನೀಡಲಾಗುವುದು. |
| 2. | ವಯಸ್ಸು | 17 ರಿಂದ 25 ವರ್ಷ | |
| 3. | ಅಭ್ಯರ್ಥಿಯ ಸಾಮಾನ್ಯ ಅರ್ಹತೆ | 1. ಕರ್ನಾಟಕ ರಾಜ್ಯದ ನಿವಾಸಿಯಾಗಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರಬೇಕು.<br>2. ಅಭ್ಯರ್ಥಿಯ ವಯಸ್ಸು 18 ರಿಂದ 25 ವರ್ಷದೊಳಗಿರಬೇಕು.<br>3. ಕನಿಷ್ಠ 10 ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.<br>4. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ನಿಗದಿತ ನಮೂನೆಯಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆದಿರಬೇಕು. | |

<table>
<tr><td>4.</td><td>ವಾರ್ಷಿಕ ಆದಾಯ</td><td colspan="3">ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ರೂ.5.00 ಲಕ್ಷ ಮೀರಿರಬಾರದು.</td></tr>
<tr><td rowspan="4">5.</td><td rowspan="4">ದೈಹಿಕ ಗುಣಮಟ್ಟ ಪರೀಕ್ಷೆ</td><td>ವಿವರಗಳು</td><td>ಪುರುಷ ಅಭ್ಯರ್ಥಿ</td><td>ಮಹಿಳಾ ಅಭ್ಯರ್ಥಿ</td></tr>
<tr><td>ಎತ್ತರ</td><td>165 ಸೆಂ. ಮೀ<br>(18 ವರ್ಷದೊಳಗಿನ ಅಭ್ಯರ್ಥಿಗಳ ಎತ್ತರ 162.5 ಸೆಂ.ಮೀ. ಗೆ ವಿನಾಯಿತಿ ನೀಡಿದೆ)</td><td>157 ಸೆಂ. ಮೀ<br>(18 ವರ್ಷದೊಳಗಿನ ಅಭ್ಯರ್ಥಿಗಳ ಎತ್ತರ 155 ಸೆಂ.ಮೀ. ಗೆ ವಿನಾಯಿತಿ ನೀಡಿದೆ)</td></tr>
<tr><td>ಎದೆ ಸುತ್ತಳತೆ</td><td>ಸಹಜ ಸ್ಥಿತಿಯಲ್ಲಿ 75 ಸೆಂ.ಮೀ. ಹೊಂದಿದ್ದು, ವಿಸ್ತರಿಸಿದಾಗ ಕನಿಷ್ಠ 80 ಸೆ.ಮೀ. ಹೊಂದಿರಬೇಕು (20 ವರ್ಷದೊಳಗಿನ ಅಭ್ಯರ್ಥಿಗಳಿಗೆ 03 ಸೆಂ.ಮೀ. ವಿನಾಯಿತಿ ಇದೆ)</td><td>ಅನ್ವಯಿಸುವುದಿಲ್ಲ</td></tr>
<tr><td>ತೂಕ</td><td>ಕನಿಷ್ಠ 45 ರಿಂದ ಗರಿಷ್ಠ 85 ಕೆ.ಜಿ. ಯೊಳಗಿರಬೇಕು (19 ವರ್ಷದೊಳಗಿನ ಅಭ್ಯರ್ಥಿಗಳು 04 ಕೆ.ಜಿ. ತೂಕದ ವಿನಾಯಿತಿ ಹೊಂದಿರುತ್ತಾರೆ)</td><td>ಕನಿಷ್ಠ 40 ರಿಂದ ಗರಿಷ್ಠ 70 ಕೆ.ಜಿ. ಯೊಳಗಿರಬೇಕು (19 ವರ್ಷದೊಳಗಿನ ಅಭ್ಯರ್ಥಿಗಳು 02 ಕೆ.ಜಿ. ತೂಕದ ವಿನಾಯಿತಿ ಹೊಂದಿರುತ್ತಾರೆ)</td></tr>
<tr><td>6.</td><td>ಅರ್ಜಿ ಸಲ್ಲಿಸುವ ವಿಧಾನ</td><td colspan="3">ಅರ್ಜಿ ನಮೂನೆಯನ್ನು ಇಲಾಖೆಯ ವೆಬ್ ಸೈಟ್ ವಿಳಾಸ www.sw.kar.nic.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು, ಈ ಕೆಳಕಂಡ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸುವುದು.<br>1. ಅಭ್ಯರ್ಥಿಯ ಜಾತಿ ಪ್ರಮಾಣ ಪತ್ರ,<br>2. ಆದಾಯ ಪ್ರಮಾಣ ಪತ್ರ,<br>3. ಅರ್ಜಿ ನಮೂನೆಯಲ್ಲಿ ವಿವರವನ್ನು ಭರ್ತಿ ಮಾಡಿ, ಭಾವ ಚಿತ್ರವನ್ನು ಅಂಟಿಸಿ, ಸಲ್ಲಿಸುವುದು.<br>ಅರ್ಜಿ ಸಲ್ಲಿಸುವಾಗ ಈ ಮೇಲಿನ ದಾಖಲೆಗಳನ್ನು ಸ್ಕಾನ್ ಮಾಡಿ ಇ-ಮೇಲ್ ವಿಳಾಸ petcuniformservices@gmail.com ಕ್ಕೆ ಸಲ್ಲಿಸುವುದು. ತಾಂತ್ರಿಕವಾಗಿ ಸಮಸ್ಯೆಗಳು ಕಂಡು ಬಂದರೆ ದೂರವಾಣಿ ಸಂಖ್ಯೆ : 080 22207784 ಗೆ ಸಂಪರ್ಕಿಸುವುದು.</td></tr>
<tr><td>7.</td><td>ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ</td><td colspan="3">15.02.2023 ಸಂಜೆ 6.00 ಗಂಟೆಗೆ</td></tr>
<tr><td>8.</td><td>ಅಭ್ಯರ್ಥಿಗಳ ಆಯ್ಕೆ</td><td colspan="3">ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ವರ್ಗವಾರು ವಿಂಗಡಿಸಿ, ನಿಗಧಿಪಡಿಸಲಾದ ಗುರಿಗೆ ಅನುಗುಣವಾಗಿ ದೈಹಿಕ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳನ್ನು 10 ನೇ ತರಗತಿಯ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಿ ಖಾಸಗಿ ತರಬೇತಿ ಸಂಸ್ಥೆಗಳಿಗೆ ತರಬೇತಿಗಾಗಿ ನಿಯೋಜಿಸಲಾಗುವುದು.</td></tr>
</table>

| | | |
|---|---|---|
| ೯. | ಇತರೆ ಷರತ್ತುಗಳು | 1. ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು.<br>2. ಅಭ್ಯರ್ಥಿಗಳಿಗೆ ದೈಹಿಕ ಸಾಮರ್ಥ್ಯ ಪರೀಕ್ಷೆ ಸಂದರ್ಭದಲ್ಲಿ ಉಂಟಾಗಬಹುದಾದ ಯಾವುದೇ ನಷ್ಟ, ದುರಂತ, ದುರ್ಘಟನೆಗೆ ಇಲಾಖೆ ಅಥವಾ ತರಬೇತಿ ನೀಡಲು ಆಯ್ಕೆಯಾದ ತರಬೇತಿ ಸಂಸ್ಥೆ ಹೊಣೆಯಾಗುವುದಿಲ್ಲ.<br>3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ನಾಮ ನಿರ್ದೇಶಿಸಿದ ಅಧಿಕಾರಿಯ ನೇತೃತ್ವದಲ್ಲಿ ರಾಜ್ಯದ ವಿವಿಧ ಕೇಂದ್ರ ಸ್ಥಾನದಲ್ಲಿ ಪೋಲೀಸ್ ಉಪ ಅಧೀಕ್ಷಕರ ಮೇಲುಸ್ತುವಾರಿಯಲ್ಲಿ ದೈಹಿಕ ಗುಣಮಟ್ಟ ಪರೀಕ್ಷೆಯನ್ನು ನಡೆಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು ಅಥವಾ ತರಬೇತಿ ನೀಡಲು ಇ-ಟೆಂಡರ್ ನಲ್ಲಿ ಎಂಪಾನಲ್‌ಗೊಂಡ ತರಬೇತಿ ಸಂಸ್ಥೆಗಳಲ್ಲಿ ಆಯುಕ್ತರಿಂದ ನಿಯೋಜನೆಗೊಂಡ ಜಿಲ್ಲಾ ಜಂಟಿ / ಉಪ ನಿರ್ದೇಶಕರ ನೇತೃತ್ವದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. |

**ತರಬೇತಿ ಸೌಲಭ್ಯ:-**

ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಉಚಿತ ಊಟ, ವಸತಿಯೊಂದಿಗೆ ೩ ತಿಂಗಳ ಸಮವಸ್ತ್ರ ಸೇವೆಗೆ ಅಗತ್ಯವಾಗಿರುವ ದೈಹಿಕ ಸಾಮರ್ಥ್ಯ ತರಬೇತಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ನೀಡಲಾಗುತ್ತದೆ.

**ಗಮನದಲ್ಲಿಡಬೇಕಾದ ಅಂಶ:-**

- ಇಲಾಖಾ ವೆಬ್‌ಸೈಟ್‌ನಲ್ಲಿ ಕಾಲಕಾಲಕ್ಕೆ ನೀಡಲಾಗುವ ಮಾಹಿತಿಯು ಅಧಿಕೃತ ಹಾಗೂ ಅಂತಿಮವಾಗಿರುತ್ತದೆ.
- ಇಲಾಖಾವತಿಯಿಂದ ಯಾವುದೇ ಪತ್ರ ವ್ಯವಹಾರವನ್ನು ನಡೆಸಲಾಗುವುದಿಲ್ಲವಾದ್ದರಿಂದ, ಇಲಾಖಾ ವೆಬ್‌ಸೈಟ್‌ನ್ನು ಕಾಲಕಾಲಕ್ಕೆ ವೀಕ್ಷಿಸತಕ್ಕದ್ದು.
- ತಪ್ಪು ಮಾಹಿತಿಯ ಕಾರಣದಿಂದ ಉಂಟಾಗಬಹುದಾದ ಲೋಪಗಳಿಗೆ ಸಂಬಂಧಪಟ್ಟ ಅಭ್ಯರ್ಥಿಗಳೇ ಕಾರಣ.
- ನಿಗಧಿತ ದಿನಾಂಕದಂದು ದೈಹಿಕ ಪರೀಕ್ಷೆಗೆ ಹಾಜರಾಗದಿದ್ದರೆ, ಆಯ್ಕೆಗೆ ಪರಿಗಣಿಸುವುದಿಲ್ಲ. ಇಂತಹ ನಿರ್ಲಕ್ಷಕ್ಕೆ ಅಭ್ಯರ್ಥಿಗಳೇ ನೇರ ಹೊಣೆಗಾರರು.

21/02/23

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.

**SOCIAL WELFARE DEPARTMENT**

**Training for various uniform services**

Note: Candidates are requested to fill the below particulars without fail

Passport size photo of the Candidate

<table>
<tr><td>1.</td><td>Name of the Candidate</td><td colspan="3"></td></tr>
<tr><td>2.</td><td>Gender</td><td colspan="3"></td></tr>
<tr><td>3.</td><td>Father Name</td><td colspan="3"></td></tr>
<tr><td>4.</td><td>Mother Name</td><td colspan="3"></td></tr>
<tr><td rowspan="2">5.</td><td>Caste</td><td colspan="3">RD No.</td></tr>
<tr><td>Sub Caste</td><td colspan="3"></td></tr>
<tr><td>6.</td><td>Income</td><td colspan="3">Rs. RD No.</td></tr>
<tr><td>7.</td><td>SSLC Registration No</td><td colspan="3"></td></tr>
<tr><td>8.</td><td>Date of Birth (D/M/Y)</td><td colspan="3"></td></tr>
<tr><td>9.</td><td>Full Address with pin code</td><td colspan="3"></td></tr>
<tr><td>10.</td><td>Aadhaar No.</td><td colspan="3"></td></tr>
<tr><td rowspan="2">11.</td><td rowspan="2">Details for Physical Test</td><td>ಎತ್ತರ</td><td>ಎದೆಯ ಸುತ್ತಳತೆ</td><td>ತೂಕ</td></tr>
<tr><td></td><td></td><td></td></tr>
<tr><td>12.</td><td>Mobile No.</td><td colspan="3"></td></tr>
<tr><td>13.</td><td>e-mail ID</td><td colspan="3"></td></tr>
</table>

**Documents to be attached**

| | | |
|---|---|---|
| 1 | Caste Certificate | |

| | | |
|---|---|---|
| 2 | Income Certificate | |
| 3 | SSLC Marks Card | |

Date:-

Signature of the Candidate

Place:-

| Remarks of the Verifying officer / staff |
|---|
| |